**II Semester B.Com. Examination, May/June 2018**
**(CBCS) (Fresh + Repeaters) (2014-15 and Onwards)**
**COMMERCE**
**Paper – 2.3 : Advanced Financial Accounting**

Time : 3 Hours                                                                 Max. Marks : 70

***Instruction** : Answers should be written **completely** in **English** or in **Kannada.***

## SECTION – A

Answer **any five** sub-questions. **Each** sub-question carries **two** marks. **(5×2=10)**

1. a) What is Average Clause ? Why is it included in fire claims ?

   b) What is Account Sales ?

   c) Mention any two differences between a joint venture and a partnership.

   d) Mention any four features of dependent branch.

   e) How do you allocate the following expenses in Departmental Accounting ?

      i) Insurance premium on stocks

      ii) Labour welfare expenses

      iii) Carriage in-wards

      iv) Canteen expenses.

   f) Calculate the actual amount of claim from the following details :

| | | |
|---|---|---|
| Stock on the date of fire accident | – | ₹ 85,000 |
| Value of goods salvaged | – | ₹ 7,500 |
| Expenses incurred for extinguishing fire | – | ₹ 3,000 |

   g) Goods are invoiced at a profit of 20% on sales. The cost price of goods sent is ₹ 1,48,800. Calculate the load included in cost price of goods sent.

P.T.O.

SECTION – B

Answer **any three** questions. **Each** question carries **six** marks. **(3×6=18)**

2. A fire occurred in the premises of Aditya on 25-8-2017, when a large part of the stock was destroyed. Salvage was ₹ 15,000. Aditya gives you the following information for the period from 1-1-2017 to 25-8-2017 :

   Purchases ₹ 85,000; Sales ₹ 90,000; Goods costing ₹ 5,000 were taken by Aditya for personal use and cost price of stock on 1-1-2017 was ₹ 40,000.

   Over the past few years, Aditya has been selling goods at a consistent gross profit rate of $33\frac{1}{3}$% on sales.

   The insurance policy was for ₹ 50,000. It included average clause. Aditya asks you to ascertain amount of loss and claim to be made on the insurance company.

3. Calculate the value of abnormal loss and value of closing stock from the following information :

   a) Goods sent on consignment – 400 units of glassware at ₹ 100/unit.
   b) Expenses incurred by the consignor – ₹ 2,000.
   c) Goods lost in transit – 20 units.
   d) Expenses incurred by the consignee – taxes ₹ 1,420 and selling expenses ₹ 1,000.
   e) Goods sold by the consignee – 340 units.
   f) Goods damaged at Consignee's place – 2% of the total goods consigned (which is permissible).

4. Naveen and Praveen entered into a joint venture to construct a building for ₹ 7,50,000. Naveen and Praveen contributed ₹ 3,75,000 and ₹ 2,85,000 respectively. They agreed to share profits and losses in the ratio of 3 : 2. It was decided that the work would be looked after by Naveen, who would be paid 10% commission on contract price in addition to his share of profits. Naveen bought the necessary materials for ₹ 6,00,000 and paid ₹ 18,000 for expenses. He also contributed building materials from his own stock worth ₹ 37,500. There was an outstanding wages of ₹ 9,000.

   The building was completed and the contract money was duly received. Praveen took over the stock of materials at an agreed value of ₹ 30,000 and outstanding wages were paid by Naveen.

   Prepare Joint Venture A/c and Praveen's A/c in the books of Naveen.

5. X Ltd., invoices goods to its branch at cost. From the following particulars, prepare Branch Account for the year ended 31-3-2017 in the books of Head Office.

| | | ₹ |
|---|---|---|
| Branch stock on 1-4-2016 | | 66,000 |
| Branch stock on 31-3-2017 | | 78,000 |
| Branch debtors on 1-4-2016 | | 42,000 |
| Branch debtors on 31-3-2017 | | 59,600 |
| Cost of goods sent to branch during the year | | 3,60,000 |
| Sales at branch : | | |
| | Cash | 1,80,000 |
| | Credit | 2,93,600 |
| Cash received from branch debtors during the year | | 2,76,000 |
| Branch expenses paid by H.O. | | 20,420 |

6. A firm has two departments X and Y. The following information related to the trading period ending 31-3-2017 :

| | X | Y | Total Amount |
|---|---|---|---|
| | ₹ | ₹ | ₹ |
| Opening stock | 5,000 | 7,000 | 12,000 |
| Purchases | 42,000 | 52,000 | 94,000 |
| Sales | 80,000 | 93,000 | 1,73,000 |
| Purchase returns | 2,000 | 2,000 | 4,000 |
| Sales returns | 2,000 | 2,000 | 4,000 |
| Carriage inwards | – | – | 4,500 |
| Power | – | – | 6,000 |
| Wages | – | – | 11,000 |
| Closing stock | 4,000 | 12,000 | 16,000 |

Wages are to be allocated in the ratio 5 : 6 and the power in the ratio 1 : 2 to the Department X and Y respectively.

Prepare Departmental Trading Account in the Columnar Form.

## SECTION – C

Answer **any three** questions. **Each** question carries **fourteen** marks. **(3×14=42)**

7. Determine the amount of claim to be lodged by M/s Tridev Company to Insurance Company from the following details :

   The company had taken a fire insurance policy for ₹ 1,20,000, covering its stock and the policy was subjected to average clause.

| | **1-10-2016 to 30-9-2017 (₹)** | **1-10-2017 to 15-3-2018 (₹)** |
|---|---|---|
| Sales | 11,43,000 | 6,90,500 |
| Purchases | 7,89,500 | 3,94,000 |
| Wages and salaries | 1,37,400 | 68,900 |
| Sales returns | 54,500 | 15,800 |
| Purchase returns | 27,400 | 9,600 |
| Carriage inwards | 27,400 | 9,600 |

   Date of fire 15-3-2018 :

   Stock on 1-10-2016 ₹ 1,28,700

   Stock on 30-9-2017 ₹ 1,89,000

   Stock salvaged ₹ 19,310

   Stocks have been valued at 10% less than cost.

8. On 1-1-2017 Chetan of Chennai dispatched to Raghu of Mysore, 500 chairs at an invoice price of ₹ 300 each, which was 25% above the cost price. He paid ₹200 for packing and ₹300 for carriage and insurance. Chetan draws three months bill for ₹50,000 which was accepted by Raghu and Chetan discounted the same for ₹ 49,800.

   Raghu received the consignment on 15-1-2017 and incurred ₹ 100 for unloading and carriage, ₹ 500 for selling expenses and ₹ 1,000 for salesman

salary. Raghu returned 50 chairs and sold 200 chairs at ₹ 330 each and 200 chairs at ₹ 350 each on credit. Raghu sent a bank draft for the amount due after deducting expenses and commission at 10% on sales and del-credere commission 3% on credit sales. On 30-3-2017 market value of chair was ₹ 250 each (closing stock).

All the money due was collected from debtors except ₹ 2,000 from Mr. Kumar, a debtor.

Prepare necessary Ledger Accounts in the books of Chetan.

9. Charith and Chinmay entered into a joint venture and agreed to share profits and losses in the ratio of 3 : 2 after providing for interest on capital at 10% p.a.

   A joint bank account was opened in which Charith deposited ₹ 4,00,000 and Chinmay deposited ₹ 2,00,000 on 1-4-2017. Goods purchased for ₹ 3,75,000 in cash and was sent to Bengaluru agent for sale.

   Freight and insurance amounted to ₹ 7,500 was paid. All the goods were sold by the agent for ₹ 7,00,000. The agent remitted the balance amount after deducting his commission at 3% and expenses of ₹ 4,000.

   Prepare :

   a) Joint venture A/c

   b) Co-venturer's A/c

   c) Joint Bank A/c and

   d) Agent's A/c in the books of joint venture.

10. Belagavi H.O. of a company invoices goods to its Hubli branch at cost plus 20%. The branch also purchases independently from local traders for which payments are made by H.O. All cash collections of the day is to be remitted to H.O. through a bank account and all expenses of the branch are directly paid by H.O. From the following, show the Hubli Branch Account in the books of H.O.

| | | ₹ |
|---|---|---|
| Imprest cash on : | | |
| | 1-1-2017 | 60,000 |
| | 31-12-2017 | 55,500 |
| Debtors on 1-1-2017 | | 7,50,000 |

| | |
|---|---|
| Stock on 1-1-2017 : | |
| Transferred from H.O. at invoice price | 7,20,000 |
| Direct purchases by branch | 4,80,000 |
| Total sales | 52,50,000 |
| Cash sales | 13,50,000 |
| Returns from customers | 90,000 |
| Direct purchase | 13,50,000 |
| Goods sent to branch from H.O. at invoice price | 18,00,000 |
| Transfer from H.O. for Petty Cash expenses | 75,000 |
| Bad debts | 30,000 |
| Discount to customers | 60,000 |
| Cash received from customers | 37,50,000 |
| Branch expenses | 9,00,000 |
| Stock on 31-12-2017 : | |
| Direct purchase by branch | 3,60,000 |
| Transferred from H.O. at invoice price | 5,40,000 |

11. From the following Trial Balance, prepare Departmental Trading and Profit and Loss Account for the year ended 31-12-2017 and a Balance Sheet as on that date in the books of VM Ltd.

| | | Dr. (₹) | Cr. (₹) |
|---|---|---|---|
| Stock on 1-1-2017 : | Dept. A | 5,400 | – |
| | Dept. B | 4,900 | – |
| Purchases : | Dept. A | 9,800 | – |
| | Dept. B | 7,350 | – |
| Sales : | Dept. A | – | 16,900 |
| | Dept. B | – | 13,520 |
| Wages : | Dept. A | 1,340 | – |
| | Dept. B | 240 | – |

| | | |
|---|---|---|
| Discount received | – | 133 |
| Capital | – | 9,530 |
| Sundry creditors | – | 3,737 |
| Rent | 1,870 | – |
| Salaries | 1,320 | – |
| Lighting and heating | 420 | – |
| Discount allowed | 441 | – |
| Advertising | 738 | – |
| Carriage inwards | 469 | – |
| Furniture and fittings | 600 | – |
| Plant and Machinery | 4,200 | – |
| Sundry debtors | 1,820 | – |
| Personal drawings | 900 | – |
| Cash in hand | 32 | – |
| Cash at bank | 1,980 | – |
| **Total** | **43,820** | **43,820** |

The following information is also provided :

a) Rent, lighting and heating, salaries and depreciation are to be apportioned to Departments A and B in the ratio 2 : 1.

b) Other expenses and incomes are to be apportioned to Departments A and B on suitable basis.

c) The following adjustments are to be made :

Rent prepaid ₹ 370; Lighting and Heating outstanding ₹ 180; Depreciation on furniture and fittings and plant and machinery @ 10% p.a.

d) The stock at 31-12-2017 :

Department A – ₹ 2,748

Department B – ₹ 2,401.

# ಕನ್ನಡ ಆವೃತ್ತಿ

## ವಿಭಾಗ - ಎ

ಯಾವುದಾದರೂ ಐದು ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ **2** ಅಂಕಗಳು. **(5×2=10)**

1. a) ಸರಾಸರಿ ಕಲಮು ಎಂದರೇನು ? ಬೆಂಕಿ ವಿಮಾ ಹಕ್ಕಿನಲ್ಲಿ ಇದನ್ನು ಯಾವ ಕಾರಣಕ್ಕಾಗಿ ಸೇರಿಸಿರುತ್ತಾರೆ ?

   b) 'ಅಕೌಂಟ್ ಸೇಲ್ಸ್' ಎಂದರೇನು ?

   c) 'ಜಂಟಿ ವ್ಯವಹಾರ' ಮತ್ತು 'ಪಾಲುದಾರಿಕೆ'ಗಿರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

   d) ಅವಲಂಬಿತ ಶಾಖೆಯ ಯಾವುದಾದರೂ ನಾಲ್ಕು ಲಕ್ಷಣಗಳನ್ನು ತಿಳಿಸಿ.

   e) ಈ ಕೆಳಗಿನ ವೆಚ್ಚಗಳನ್ನು ವಿಭಾಗೀಯ ಲೆಕ್ಕಪುಸ್ತಕದಲ್ಲಿ ಹೇಗೆ ವಿತರಿಸುವಿರಿ ?

      i) ದಾಸ್ತಾನಿನ ಮೇಲಿನ ವಿಮೆ ಪ್ರೀಮಿಯಂ

      ii) ಕಾರ್ಮಿಕರ ಕಲ್ಯಾಣ ವೆಚ್ಚ

      iii) ಒಳ ಸಾರಿಗೆ

      iv) ಉಪಾಹಾರ ಗೃಹದ ಖರ್ಚು.

   f) ಈ ಕೆಳಗಿನ ವಿವರಗಳಿಂದ ವಿಮೆಯ ಬೆಂಕಿನಷ್ಟ ಪರಿಹಾರ ಕಂಡುಹಿಡಿಯಿರಿ :

| | | |
|---|---|---|
| ಬೆಂಕಿ ಅಪಘಾತದ ದಿನದಂದು ಇದ್ದ ದಾಸ್ತಾನು | – | ₹ 85,000 |
| ಬೆಂಕಿಯಿಂದ ರಕ್ಷಿಸಿದ ದಾಸ್ತಾನಿನ ವೆಚ್ಚ | – | ₹ 7,500 |
| ಬೆಂಕಿಯನ್ನು ನಂದಿಸಲು ತಗುಲಿದ ವೆಚ್ಚ | – | ₹ 3,000 |

   g) ಸರಕುಗಳನ್ನು ಮಾರಾಟ ಬೆಲೆಯ ಮೇಲೆ 20% ಲಾಭದ ದರದಲ್ಲಿ ರವಾನಿಸಿದೆ. ಈ ಸರಕುಗಳ ವೆಚ್ಚ ₹ 1,48,800 ಇದ್ದರೆ, ಸರಕುಗಳ ವೆಚ್ಚ ಪಟ್ಟಿ ಬೆಲೆಯಲ್ಲಿ ಸೇರಿರುವ ಹೇರಿಕೆ (load) ಎಷ್ಟು ಎಂದು ಕಂಡುಹಿಡಿಯಿರಿ.

## ವಿಭಾಗ - ಬಿ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು. **(3×6=18)**

2. ದಿನಾಂಕ 25-8-2017 ರಂದು ಆದಿತ್ಯರವರ ಆವರಣದಲ್ಲಿ ಬೆಂಕಿ ತಗುಲಿತು ಮತ್ತು ಇದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸರಕು ನಾಶವಾಯಿತು. ಬೆಂಕಿಯಿಂದ ರಕ್ಷಿಸಲ್ಪಟ್ಟ ಸರಕಿನ ಮೌಲ್ಯ ₹ 15,000. ಆದಿತ್ಯರವರು 1-1-2017 ರಿಂದ 25-8-2017ರ ವರೆಗಿನ ವಿವರಗಳನ್ನು ಈ ಕೆಳಗಿನಂತೆ ನೀಡಿದ್ದಾರೆ.

   ಖರೀದಿ ₹ 85,000; ಮಾರಾಟ ₹ 90,000; ಆದಿತ್ಯರವರು ಸ್ವಂತ ಉಪಯೋಗಕ್ಕಾಗಿ ಬಳಸಿದ ಸರಕಿನ ಮೌಲ್ಯ ₹ 5,000 ಮತ್ತು 1-1-2017 ರಂದು ಇದ್ದ ದಾಸ್ತಾನಿನ ವೆಚ್ಚ ಬೆಲೆ ₹ 40,000.

   ಇತ್ತೀಚಿನ ಕೆಲವು ವರ್ಷಗಳಿಂದ ಆದಿತ್ಯರವರು ಸರಕನ್ನು, ನಿಯಮಿತವಾಗಿ ಸ್ಥೂಲ ಲಾಭ $33\frac{1}{3}\%$ ಮಾರಾಟ ಬೆಲೆಯ ಮೇಲೆ ಇರುವಂತೆ, ಮಾರಾಟ ಮಾಡುತ್ತಾ ಬಂದಿದ್ದಾರೆ.

   ಬೆಂಕಿ ವಿಮೆ ಪಾಲಿಸಿಯ ಮೊತ್ತ ₹ 50,000 ಇದ್ದು, ಅದು ಸರಾಸರಿ ಕಲಮಿಗೆ ಒಳಪಟ್ಟಿರುತ್ತದೆ. ಆದಿತ್ಯರವರು ನಿಮ್ಮನ್ನು ದಾಸ್ತಾನಿನ ಒಟ್ಟು ನಷ್ಟ ಮತ್ತು ನಷ್ಟ ಪರಿಹಾರ ಬೇಡಿಕೆಯನ್ನು ಕಂಡುಹಿಡಿಯಲು ಹೇಳಿದ್ದಾರೆ.

3. ಕೆಳಗೆ ಕೊಟ್ಟಿರುವ ಮಾಹಿತಿಯಿಂದ ಅಸಾಮಾನ್ಯ ನಷ್ಟ ಮತ್ತು ಮುಕ್ತಾಯ ದಾಸ್ತಾನಿನ ಮೌಲ್ಯವನ್ನು ಕಂಡುಹಿಡಿಯಿರಿ :

   a) ಸರಕು ರವಾನೆ ಮಾಡಿದ್ದು – ಗಾಜಿನ ವಸ್ತುಗಳ 400 ಘಟಕಗಳನ್ನು, ಪ್ರತಿ ಘಟಕಕ್ಕೆ ₹ 100ರಂತೆ.

   b) ಸರಕು ರವಾನೆ ಮಾಡಿದವರು ವ್ಯಯಿಸಿದ ವೆಚ್ಚ – ₹ 2,000.

   c) ಸಾಗಾಣಿಯ ಮಾರ್ಗ ಮಧ್ಯದಲ್ಲಿ ಕಳೆದುಹೋದ ಸರಕು – 20 ಘಟಕಗಳು.

   d) ಸರಕು ಪಡೆದವರು ವ್ಯಯಿಸಿದ ವೆಚ್ಚ – ತೆರಿಗೆ ₹ 1,420 ಮತ್ತು ಮಾರಾಟ ವೆಚ್ಚ ₹ 1,000.

   e) ಸರಕು ಪಡೆದವರು ಮಾರಾಟ ಮಾಡಿದ್ದ ಸರಕು – 340 ಘಟಕಗಳು

   f) ಸರಕು ಪಡೆದವರ ಆವರಣದಲ್ಲಿ ಹಾನಿಗೊಳಗಾದ ಸರಕುಗಳು – ಒಟ್ಟು ಸರಕಿನ ರವಾನೆ ಮಾಡಿದ್ದುದರ ಮೇಲೆ 2%. (ಸಾಮಾನ್ಯ ನಷ್ಟ ಅನುಮತಿಯಿರುವುದು).

4. ₹ 7,50,000 ಮೌಲ್ಯದ ಕಟ್ಟಡವನ್ನು ಕಟ್ಟಲು ನವೀನ್ ಮತ್ತು ಪ್ರವೀಣ್ ಎಂಬುವವರು ಜಂಟಿ ವ್ಯವಹಾರಕ್ಕೆ ಪ್ರವೇಶಿಸಿದ್ದಾರೆ. ನವೀನ್ ಮತ್ತು ಪ್ರವೀಣ್ ಕ್ರಮವಾಗಿ ₹ 3,75,000 ಮತ್ತು ₹ 2,85,000 ವನ್ನು ತೊಡಗಿಸಿರುತ್ತಾರೆ. ಅವರು ಲಾಭ ಮತ್ತು ನಷ್ಟವನ್ನು ಕ್ರಮವಾಗಿ 3 : 2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ನವೀನ್‌ರವರು ವ್ಯವಹಾರವನ್ನು ನೋಡಿಕೊಳ್ಳಬೇಕೆಂದು, ಅದಕ್ಕಾಗಿ ಅವರಿಗೆ ಬರಬೇಕಾದ ಲಾಭದ ಜೊತೆಗೆ ಗುತ್ತಿಗೆ ಬೆಲೆಯ ಮೇಲೆ 10% ದಲ್ಲಾಳಿ ಕೊಡಬೇಕೆಂದು ಒಡಂಬಡಿಕೆಯಾಗಿರುತ್ತದೆ. ನವೀನ್‌ರವರು ಕಟ್ಟಡಕ್ಕೆ ಬೇಕಾದ ಸಾಮಗ್ರಿಗಳನ್ನು ₹ 6,00,000 ಮತ್ತು ಇತರೆ

ಖರ್ಚುಗಳಿಗಾಗಿ ₹ 18,000 ವನ್ನು ವ್ಯಯಿಸಿದ್ದಾರೆ. ಇದರ ಜೊತೆಗೆ ಅವರು ತಮ್ಮ ಸ್ವಂತ ದಾಸ್ತಾನಿನಿಂದ ₹ 37,500 ಮೌಲ್ಯದ ಕಟ್ಟಡ ಸಾಮಗ್ರಿಗಳನ್ನು ಕೊಟ್ಟಿದ್ದಾರೆ. ₹ 9,000 ಬಾಕಿ ಉಳಿದ ಕೂಲಿ ಇರುತ್ತದೆ.

ಕಟ್ಟಡವು ಪೂರ್ಣಗೊಂಡಿದ್ದು, ಗುತ್ತಿಗೆ ಬೆಲೆಯು ಪೂರ್ಣವಾಗಿ ಸಂದಾಯವಾಗಿರುತ್ತದೆ. ಉಪಯೋಗಿಸದೆ ಉಳಿದ ಸಾಮಗ್ರಿಗಳನ್ನು ₹ 30,000 ಕ್ಕೆ ಪ್ರವೀಣ್‌ರವರು ತೆಗೆದುಕೊಂಡಿರುತ್ತಾರೆ ಮತ್ತು ಬಾಕಿ ಇರುವ ಕೂಲಿಯನ್ನು ನವೀನರವರು ಪಾವತಿಸಿರುತ್ತಾರೆ.

ನವೀನ್‌ರವರ ಲೆಕ್ಕ ಪುಸ್ತಕದಲ್ಲಿ ಜಂಟಿ ವ್ಯವಹಾರ ಖಾತೆ ಮತ್ತು ಪ್ರವೀಣ್‌ರವರ ಖಾತೆಯನ್ನು ತಯಾರಿಸಿ.

5. X ಲಿಮಿಟೆಡ್ ಸಂಸ್ಥೆಯು ತನ್ನ ಶಾಖೆಗೆ ಸರಕನ್ನು ವೆಚ್ಚ ಬೆಲೆಯಲ್ಲಿ ರವಾನಿಸುತ್ತದೆ. ದಿನಾಂಕ 31-3-2017 ರಂದು ಮುಕ್ತಾಯವಾಗುವ ವರ್ಷಕ್ಕೆ ಕೇಂದ್ರ ಕಛೇರಿಯ ಪುಸ್ತಕದಲ್ಲಿ ಶಾಖೆಯ ಖಾತೆಯನ್ನು ಕೆಳಗೆ ಕೊಟ್ಟಿರುವ ಮಾಹಿತಿಯಿಂದ ತಯಾರಿಸಿ :

| | ₹ |
|---|---|
| ದಿನಾಂಕ 1-4-2016 ರಂದು ಶಾಖೆಯ ದಾಸ್ತಾನು | 66,000 |
| ದಿನಾಂಕ 31-3-2017 ರಂದು ಶಾಖೆಯ ದಾಸ್ತಾನು | 78,000 |
| ದಿನಾಂಕ 1-4-2016 ರಂದು ಶಾಖೆಯ ಋಣಿಗಳು | 42,000 |
| ದಿನಾಂಕ 31-3-2017 ರಂದು ಶಾಖೆಯ ಋಣಿಗಳು | 59,600 |
| ಪ್ರಸಕ್ತ ವರ್ಷದಲ್ಲಿ ಶಾಖೆಗೆ ಕಳುಹಿಸಿದ ಸರಕಿನ ವೆಚ್ಚ ಬೆಲೆ | 3,60,000 |
| ಶಾಖೆಯ ಮಾರಾಟ : | |
| ನಗದು | 1,80,000 |
| ಉದ್ದರಿ | 2,93,600 |
| ಪ್ರಸಕ್ತ ವರ್ಷದಲ್ಲಿ ಶಾಖೆಯ ಋಣಿಗಳಿಂದ ಸ್ವೀಕರಿಸಿದ ನಗದು | 2,76,000 |
| ಕೇಂದ್ರ ಕಛೇರಿಯಿಂದ ಪಾವತಿಯಾದ ಶಾಖೆಯ ವೆಚ್ಚಗಳು | 20,420 |

6. ಒಂದು ಸಂಸ್ಥೆಯಲ್ಲಿ X ಮತ್ತು Y ಎಂದು ಎರಡು ವಿಭಾಗಗಳಿವೆ. ಈ ಕೆಳಗಿನ ವಿವರಗಳು 31-3-2017 ಕ್ಕೆ ಮುಕ್ತಾಯವಾಗುವ ವ್ಯವಹಾರ ವರ್ಷಕ್ಕೆ ಸಂಬಂಧಿಸಿದೆ :

| | X ₹ | Y ₹ | ಒಟ್ಟು ಮೊತ್ತ ₹ |
|---|---|---|---|
| ಪ್ರಾರಂಭಿಕ ದಾಸ್ತಾನು | 5,000 | 7,000 | 12,000 |
| ಖರೀದಿ | 42,000 | 52,000 | 94,000 |
| ಮಾರಾಟ | 80,000 | 93,000 | 1,73,000 |
| ಖರೀದಿ ಹಿಂತಿರುಗಿಸಿರುವುದು | 2,000 | 2,000 | 4,000 |
| ಮಾರಾಟ ಹಿಂತಿರುಗಿಸಿರುವುದು | 2,000 | 2,000 | 4,000 |

| | | | |
|---|---|---|---|
| ಒಳ ಸಾಗಾಣಿಕೆ | – | – | 4,500 |
| ವಿದ್ಯುತ್ ಶಕ್ತಿ | – | – | 6,000 |
| ಕೂಲಿ | – | – | 11,000 |
| ಮುಕ್ತಾಯದ ದಾಸ್ತಾನು | 4,000 | 12,000 | 16,000 |

ಕೂಲಿಯನ್ನು 5 : 6 ಅನುಪಾತದಲ್ಲಿ ಮತ್ತು ವಿದ್ಯುತ್ ಶಕ್ತಿಯನ್ನು 1 : 2 ಅನುಪಾತದಲ್ಲಿ ಕ್ರಮವಾಗಿ X ಮತ್ತು Y ವಿಭಾಗಗಳಿಗೆ ಹಂಚಿ.

ವಿಭಾಗೀಯ ವ್ಯವಹಾರ ಖಾತೆಯನ್ನು ಲಂಬ ವಿಧಾನದಲ್ಲಿ ತಯಾರಿಸಿ.

## ವಿಭಾಗ – ಸಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು. (3×14=42)

7. ಈ ಕೆಳಗಿನ ವಿವರಗಳಿಂದ ಮೆ. ತ್ರಿದೇವ್ ಸಂಸ್ಥೆಯು ವಿಮಾ ಕಂಪೆನಿಗೆ ಸಲ್ಲಿಸಬೇಕಾದ ವಿಮಾ ಹಕ್ಕಿನ ಮೊತ್ತವನ್ನು ಕಂಡುಹಿಡಿಯಿರಿ.

ಸಂಸ್ಥೆಯು ದಾಸ್ತಾನಿನ ರಕ್ಷಣೆಗೋಸ್ಕರ ಬೆಂಕಿ ವಿಮಾ ಪಾಲಿಸಿಯನ್ನು ₹ 1,20,000 ಗೆ ತೆಗೆದುಕೊಂಡಿದೆ ಮತ್ತು ಈ ಪಾಲಿಸಿಯು ಸರಾಸರಿ ಕಲಮಿಗೆ ಒಳಪಟ್ಟಿದೆ :

| | 1-10-2016 ರಿಂದ 30-9- 2017 (₹) | 1-10-2017 ರಿಂದ 15-3-2018 (₹) |
|---|---|---|
| ಮಾರಾಟ | 11,43,000 | 6,90,500 |
| ಖರೀದಿ | 7,89,500 | 3,94,000 |
| ಕೂಲಿ ಮತ್ತು ವೇತನ | 1,37,400 | 68,900 |
| ಮಾರಾಟ ಹಿಂತಿರುಗಿಸಿರುವುದು | 54,500 | 15,800 |
| ಖರೀದಿ ಹಿಂತಿರುಗಿಸಿರುವುದು | 27,400 | 9,600 |
| ಒಳ ಸಾಗಾಣಿಕೆ | 27,400 | 9,600 |

ಬೆಂಕಿ ಅನಾಹುತ ಸಂಭವಿಸಿದ ದಿನ 15-3-2018 :

ದಿನಾಂಕ 1-10-2016 ರಂದು ದಾಸ್ತಾನು ₹ 1,28,700

ದಿನಾಂಕ 30-9-2017 ರಂದು ದಾಸ್ತಾನು ₹ 1,89,000

ಬೆಂಕಿಯಿಂದ ರಕ್ಷಿಸಿದ ದಾಸ್ತಾನು ₹ 19,310

ದಾಸ್ತಾನುಗಳನ್ನು ವೆಚ್ಚ ಬೆಲೆಗಿಂತ 10% ರಷ್ಟು ಕಡಿಮೆ ಬೆಲೆಯಲ್ಲಿ ಮೌಲ್ಯ ಮಾಡಲಾಗಿದೆ.

8. ದಿನಾಂಕ1-1-2017 ರಂದು ಚೆನ್ನೈನ ಚೇತನ್‌ರವರು ಮೈಸೂರಿನ ರಘುರವರಿಗೆ 500 ಕುರ್ಚಿಗಳನ್ನು ಮಾರಾಟ ಪಟ್ಟಿ ಬೆಲೆ ಪ್ರತಿ ಕುರ್ಚಿಗೆ ₹ 300 ರಂತೆ ರವಾನಿಸಿದ್ದಾರೆ. ಮಾರಾಟ ಪಟ್ಟಿ ಬೆಲೆ ವೆಚ್ಚ ಬೆಲೆಯ ಮೇಲೆ 25% ಇರುತ್ತದೆ. ಚೇತನ್‌ರವರು ಪ್ಯಾಕಿಂಗ್‌ಗೆ ₹ 200 ಮತ್ತು ಸಾಗಾಣಿಕೆ ಮತ್ತು ವಿಮೆಗೆ ₹ 300 ಪಾವತಿಸಿರುತ್ತಾರೆ. ಅವರು ಮೂರು ತಿಂಗಳಿಗೆ ಬರೆದ ₹ 50,000 ಹುಂಡಿಯನ್ನು ರಘುರವರು ಒಪ್ಪಿರುತ್ತಾರೆ ಮತ್ತು ಚೇತನ್‌ರವರು ಆ ಹುಂಡಿಯನ್ನು ₹ 49,800 ಗಳಿಗೆ ಸೋಡಿ ಮಾಡಿರುತ್ತಾರೆ.

ರಘುರವರು ದಿನಾಂಕ 15-1-2017 ರಂದು ರವಾನಿಸಿದ ಸರಕನ್ನು ಪಡೆದಿರುತ್ತಾರೆ ಮತ್ತು ಅವರು ₹ 100 ಸರಕು ಇಳಿಸುವುದಕ್ಕೆ ಮತ್ತು ಸಾಗಾಣಿಕೆಗೆ, ₹ 500 ಮಾರಾಟ ವೆಚ್ಚಕ್ಕೆ ಹಾಗೂ ₹ 1,000 ಮಾರಾಟಗಾರನ ಸಂಬಳಕ್ಕೆ ವ್ಯಯಿಸಿರುತ್ತಾರೆ. ರಘು ಹಿಂತಿರುಗಿಸಿದ ಕುರ್ಚಿಗಳು 50; ಪ್ರತಿ ಕುರ್ಚಿಗೆ ₹ 330 ರಂತೆ ಮಾರಾಟ ಮಾಡಿದ ಕುರ್ಚಿಗಳು 200 ಮತ್ತು ಪ್ರತಿ ಕುರ್ಚಿಗೆ ₹ 350 ರಂತೆ ಉದ್ದರಿಯಲ್ಲಿ ಮಾರಾಟ ಮಾಡಿದ ಕುರ್ಚಿಗಳು 200. ರಘುರವರು ತಾವು ಮಾಡಿದ ವೆಚ್ಚಗಳು, ದಲ್ಲಾಳಿ ಮಾರಾಟದ ಮೇಲೆ 10% ಮತ್ತು ಡೆಲ್‌ಕ್ರೆಡರ್ ದಲ್ಲಾಳಿ ಉದ್ದರಿ ಮಾರಾಟದ ಮೇಲೆ 3% ಅನ್ನು ಕಳೆದು, ಉಳಿದ ಹಣಕ್ಕೆ ಬ್ಯಾಂಕ್ ಡ್ರಾಫ್ಟ್ ಕಳುಹಿಸಿರುತ್ತಾರೆ. ದಿನಾಂಕ 30-3-2017 ರಂದು ಪ್ರತಿ ಕುರ್ಚಿಯ ಮಾರುಕಟ್ಟೆ ಬೆಲೆ ₹ 250 ಇರುತ್ತದೆ (ಮುಕ್ತಾಯ ದಾಸ್ತಾನು).

ಕುಮಾರ್ ಎಂಬ ಋಣಿಯಿಂದ ಬರಬೇಕಾದ ₹ 2,000 ಹೊರತುಪಡಿಸಿ, ಉಳಿದೆಲ್ಲ ಹಣವನ್ನು ಋಣಿಗಳಿಂದ ಸಂಗ್ರಹಿಸಿರುತ್ತಾರೆ.

ಚೇತನ್‌ರವರ ಲೆಕ್ಕಪುಸ್ತಕದಲ್ಲಿ ಅವಶ್ಯಕವಾದ ಲಡ್ಜರ್ ಖಾತೆಗಳನ್ನು ಬರೆಯಿರಿ.

9. ಚರಿತ್ ಮತ್ತು ಚಿನ್ಮಯ್‌ರವರು ಒಂದು ಜಂಟಿ ವ್ಯವಹಾರಕ್ಕೆ ಪ್ರವೇಶಿಸಿ, ಅದರಲ್ಲಿ ಬಂಡವಾಳದ ಮೇಲೆ ಪ್ರತಿ ವರ್ಷಕ್ಕೆ 10% ಬಡ್ಡಿಯನ್ನು ತೆಗೆದ ಮೇಲೆ ಬರುವ ಲಾಭ-ನಷ್ಟಗಳನ್ನು ಕ್ರಮವಾಗಿ 3 : 2 ರ ಅನುಪಾತದಲ್ಲಿ ಹಂಚಿಕೊಳ್ಳಲು ಒಡಂಬಡಿಕೆ ಮಾಡಿಕೊಂಡಿರುತ್ತಾರೆ.

ದಿನಾಂಕ 1-4-2017 ರಂದು ಒಂದು ಜಂಟಿ ಬ್ಯಾಂಕ್ ಖಾತೆಯನ್ನು ತೆರೆದು, ಅದರಲ್ಲಿ ಚರಿತ್ ₹ 4,00,000 ಮತ್ತು ಚಿನ್ಮಯ್ ₹ 2,00,000 ಜಮಾ ಮಾಡಿರುತ್ತಾರೆ. ಸರಕುಗಳನ್ನು ₹ 3,75,000 ನಗದು ಕೊಟ್ಟು ಖರೀದಿಸಿ, ಅವನ್ನು ಬೆಂಗಳೂರಿನಲ್ಲಿರುವ ಪ್ರತಿನಿಧಿಗೆ (Agent)ಗೆ ಮಾರಾಟ ಮಾಡಲು ರವಾನಿಸಿದ್ದಾರೆ.

ಅವರು ಸಾಗಾಣಿಕೆ ಮತ್ತು ವಿಮೆಗಾಗಿ ₹ 7,500 ನ್ನು ವ್ಯಯಿಸಿದ್ದಾರೆ. ಪ್ರತಿನಿಧಿಯು ಎಲ್ಲಾ ಸರಕುಗಳನ್ನು ₹ 7,00,000 ಕ್ಕೆ ಮಾರಾಟ ಮಾಡಿದ್ದಾರೆ. ಪ್ರತಿನಿಧಿಯು ತನಗೆ ಬರಬೇಕಾದ 3% ದಲ್ಲಾಳಿ ಮತ್ತು ವೆಚ್ಚಗಳಿಗಾಗಿ ₹ 4,000 ವನ್ನು ಕಡಿತಗೊಳಿಸಿ ಬಾಕಿ ಉಳಿದ ಮೊತ್ತವನ್ನು ಸಂದಾಯ ಮಾಡಿರುತ್ತಾರೆ.

ಜಂಟಿ ವ್ಯವಹಾರದ ಲೆಕ್ಕ ಪುಸ್ತಕದಲ್ಲಿ :

a) ಜಂಟಿ ವ್ಯವಹಾರ ಖಾತೆ

b) ಜಂಟಿ ವ್ಯವಹಾರಸ್ಥರ ಖಾತೆ

c) ಜಂಟಿ ಬ್ಯಾಂಕ್ ಖಾತೆ ಮತ್ತು

d) ಪ್ರತಿನಿಧಿಯ ಖಾತೆಗಳನ್ನು ತಯಾರಿಸಿ.

10. ಬೆಳಗಾವಿಯಲ್ಲಿ ಕೇಂದ್ರ ಕಛೇರಿಯಿರುವ ಒಂದು ಸಂಸ್ಥೆಯು ತನ್ನ ಹುಬ್ಬಳ್ಳಿ ಶಾಖೆಗೆ ಸರಕುಗಳನ್ನು ವೆಚ್ಚದ ಮೇಲೆ 20% ಮಾರಾಟ ಪಟ್ಟಿ ಬೆಲೆಯಲ್ಲಿ ಕಳುಹಿಸುತ್ತದೆ. ಶಾಖೆಯು ಸ್ವತಂತ್ರವಾಗಿಯೂ ಸ್ಥಳೀಯ ವ್ಯಾಪಾರಿಗಳಿಂದ ಖರೀದಿಸುತ್ತದೆ ಮತ್ತು ಖರೀದಿ ಮೊತ್ತವನ್ನು ಕೇಂದ್ರ ಕಛೇರಿಯು ಪಾವತಿಸುತ್ತದೆ. ಪ್ರತಿದಿನದ ನಗದು ಸಂಗ್ರಹಣೆಯನ್ನು ಶಾಖೆಯು ಬ್ಯಾಂಕ್ ಖಾತೆಯ ಮುಖಾಂತರ ಸಂದಾಯ ಮಾಡುತ್ತದೆ ಮತ್ತು ಶಾಖೆಯ ಎಲ್ಲಾ ವೆಚ್ಚಗಳನ್ನು ಕೇಂದ್ರ ಕಛೇರಿಯು ನೇರವಾಗಿ ಪಾವತಿಸುತ್ತದೆ.

ಈ ಕೆಳಗೆ ಕೊಟ್ಟಿರುವ ವಿವರಗಳಿಂದ ಹುಬ್ಬಳ್ಳಿ ಶಾಖೆಯ ಖಾತೆಯನ್ನು ಕೇಂದ್ರ ಕಛೇರಿಯ ಲೆಕ್ಕ ಪುಸ್ತಕದಲ್ಲಿ ಬರೆಯಿರಿ :

| | ₹ |
|---|---|
| ಇಂಪ್ರೆಸ್ಟ್ ನಗದು : | |
| ದಿನಾಂಕ 1-1-2017 ರಂದು | 60,000 |
| ದಿನಾಂಕ 31-12-2017 ರಂದು | 55,500 |
| ದಿನಾಂಕ 1-1-2017 ರಂದು ಋಣಿಗಳು | 7,50,000 |
| ದಿನಾಂಕ 1-1-2017 ರಂದು ದಾಸ್ತಾನು : | |
| ಕೇಂದ್ರ ಕಛೇರಿಯಿಂದ ಮಾರಾಟ ಪಟ್ಟಿ ಬೆಲೆಯಲ್ಲಿ ಕಳುಹಿಸಿದ್ದು | 7,20,000 |
| ಶಾಖೆಯಿಂದ ನೇರವಾಗಿ ಖರೀದಿಸಿದ್ದು | 4,80,000 |
| ಒಟ್ಟು ಮಾರಾಟ | 52,50,000 |
| ನಗದು ಮಾರಾಟ | 13,50,000 |
| ಗ್ರಾಹಕರು ಹಿಂತಿರುಗಿಸಿದ್ದು | 90,000 |
| ನೇರ ಖರೀದಿ | 13,50,000 |
| ಕೇಂದ್ರ ಕಛೇರಿಯಿಂದ ಶಾಖೆಗೆ ಸರಕುಗಳನ್ನು ಮಾರಾಟ ಪಟ್ಟಿ ಬೆಲೆಯಲ್ಲಿ ಕಳುಹಿಸಿದ್ದು | 18,00,000 |
| ಕೇಂದ್ರ ಕಛೇರಿಯಿಂದ ಚಿಲ್ಲರೆ ನಗದು ಖರ್ಚುಗಳಿಗಾಗಿ ವರ್ಗಾಯಿಸಿದ್ದು | 75,000 |
| ಕೆಟ್ಟ ಸಾಲಗಳು | 30,000 |
| ಗ್ರಾಹಕರಿಗೆ ಕೊಟ್ಟ ಸೋಡಿ | 60,000 |
| ಗ್ರಾಹಕರಿಂದ ಬಂದ ನಗದು | 37,50,000 |

| | |
|---|---|
| ಶಾಖೆಯ ವೆಚ್ಚಗಳು | 9,00,000 |
| ದಿನಾಂಕ 31-12-2017 ರಂದು ಇದ್ದ ದಾಸ್ತಾನು : | |
| ಶಾಖೆಯಿಂದ ನೇರ ಖರೀದಿಯಾಗಿದ್ದು | 3,60,000 |
| ಕೇಂದ್ರ ಕಛೇರಿಯಿಂದ ಮಾರಾಟ ಪಟ್ಟಿ ಬೆಲೆಯಲ್ಲಿ ವರ್ಗಾವಣೆಯಾಗಿದ್ದು | 5,40,000 |

11. ಈ ಕೆಳಗೆ ಕೊಟ್ಟಿರುವ ತಾಳೆಪಟ್ಟಿಯಿಂದ ದಿನಾಂಕ 31-12-2017 ರಂದು ಮುಕ್ತಾಯವಾಗುವ ವರ್ಷದ, VM ಲಿಮಿಟೆಡ್‌ರವರ ವಿಭಾಗೀಯ ವ್ಯವಹಾರ ಮತ್ತು ಲಾಭ ಮತ್ತು ನಷ್ಟಗಳ ಖಾತೆಯನ್ನು ಮತ್ತು ಆ ದಿನದಂದಿನ ಆಢಾವೆ ಪತ್ರವನ್ನು ತಯಾರಿಸಿ.

| | | Dr. (₹) | Cr. (₹) |
|---|---|---|---|
| ದಿನಾಂಕ 1-1-2017 ರಂದು ದಾಸ್ತಾನು : | | | |
| | ವಿಭಾಗ ಎ | 5,400 | – |
| | ವಿಭಾಗ ಬಿ | 4,900 | – |
| ಖರೀದಿ | ವಿಭಾಗ ಎ | 9,800 | – |
| | ವಿಭಾಗ ಬಿ | 7,350 | – |
| ಮಾರಾಟ | ವಿಭಾಗ ಎ | – | 16,900 |
| | ವಿಭಾಗ ಬಿ | – | 13,520 |
| ಕೂಲಿ | ವಿಭಾಗ ಎ | 1,340 | – |
| | ವಿಭಾಗ ಬಿ | 240 | – |
| ಸೋಡಿ ಸ್ವೀಕರಿಸುವುದು | | – | 133 |
| ಬಂಡವಾಳ | | – | 9,530 |
| ಇತರೆ ಧಣಿಗಳು | | – | 3,737 |
| ಬಾಡಿಗೆ | | 1,870 | – |
| ವೇತನ | | 1,320 | – |
| ಬೆಳಕು ಮತ್ತು ಶಾಖ | | 420 | – |
| ಸೋಡಿ ಕೊಟ್ಟಿರುವುದು | | 441 | – |
| ಜಾಹೀರಾತು | | 738 | – |

| | | |
|---|---|---|
| ಒಳ ಸಾಗಾಣಿಕೆ | 469 | – |
| ಪೀಠೋಪಕರಣಗಳು | 600 | – |
| ಸ್ಥಾವರ ಮತ್ತು ಯಂತ್ರಗಳು | 4,200 | – |
| ಇತರೆ ಋಣಿಗಳು | 1,820 | – |
| ವೈಯಕ್ತಿಕ ಬಳಕೆ | 900 | – |
| ಕೈಯಲ್ಲಿರುವ ನಗದು | 32 | – |
| ಬ್ಯಾಂಕಿನಲ್ಲಿರುವ ನಗದು | 1,980 | – |
| **ಒಟ್ಟು** | **43,820** | **43,820** |

ಈ ಕೆಳಗಿನ ಮಾಹಿತಿ ಲಭ್ಯವಿದೆ :

a) ಬಾಡಿಗೆ, ಬೆಳಕು ಮತ್ತು ಶಾಖ, ವೇತನ ಮತ್ತು ಸವಕಳಿಯನ್ನು ವಿಭಾಗ 'ಎ' ಮತ್ತು 'ಬಿ'ಗೆ ಕ್ರಮವಾಗಿ 2 : 1ರ ಅನುಪಾತದಲ್ಲಿ ವಿತರಿಸಿ.

b) ಇನ್ನುಳಿದ ಖರ್ಚುಗಳು ಮತ್ತು ಆದಾಯಗಳನ್ನು ಸೂಕ್ತವಾದ ಆಧಾರದಲ್ಲಿ ವಿಭಾಗ 'ಎ' ಮತ್ತು 'ಬಿ'ಗೆ ವಿತರಿಸಿ.

c) ಕೆಳಗೆ ಕೊಟ್ಟಿರುವುದನ್ನು ಹೊಂದಾಣಿಕೆ ಮಾಡಿ :

ಮುಂಚಿತವಾಗಿ ಕೊಟ್ಟಿರುವ ಬಾಡಿಗೆ ₹ 370; ಬಾಕಿಯಿರುವ ಬೆಳಕು ಮತ್ತು ಶಾಖ ₹ 180;
ಪೀಠೋಪಕರಣಗಳು ಮತ್ತು ಯಂತ್ರ ಮತ್ತು ಸ್ಥಾವರಗಳ ಮೇಲಿನ ಸವಕಳಿ 10% ಪ್ರತಿ ವರ್ಷಕ್ಕೆ.

d) ದಿನಾಂಕ 31-12-2017 ರಂದು ಇದ್ದ ದಾಸ್ತಾನು :

ವಿಭಾಗ ಎ – ₹ 2,748

ವಿಭಾಗ ಬಿ – ₹ 2,401.